**ಎರಡನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ**

**ಸಾಃ ಗೋಕಾಕ**

ಸಿ.ಸಿ.ನಂಬರ **47/2024**

ನಾನು, ರೂಪಾ ಮಟ್ಟಿ,

ಬಿ.ಎಸ್.ಸಿ ಎಲ್ಎಲ್.ಎಮ್.,

ಎರಡನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಮ್ಎಫ್‌ಸಿ,ಗೋಕಾಕ.

**ದೋಷಾರೋಪಣೆ**

ಆರೋಪಿತರ ಹೆಸರುಃ 1) ಸಿದ್ದಗುಳೆಪ್ಪಾ ಕೇಮಪ್ಪಾ ಬಡಕುರಿ

2) ಮುತ್ತವ್ವಾ ಸಿದ್ದಗುಳೆಪ್ಪಾ ಬಡಕುರಿ

ಇಬ್ಬರೂ ಸಾಃ ಕೈತನಾಳ ಹೊಸುರು, ತಾಃ ಗೋಕಾಕ, ಜಿಃ ಬೆಳಗಾವಿ.

**ನಿಮ್ಮ ಮೇಲೆ ಹೊರೆಸುವ ದೊಷಾರೋಪಣೆ ಏನೆಂದರೆ:**

ಈ ನ್ಯಾಯಾಲಯದ ವ್ಯಾಪ್ತಿಯ ಗೋಕಾಕ ಗ್ರಾಮೀಣ ಪೊಲೀಸ ಠಾಣೆಯ ಸರ ಹದ್ದಿಯ ಪೈಕಿ ಕೈತನಾಳ ಹೊಸುರು ಗ್ರಾಮದಲ್ಲಿ ಚಾಸಾ.1 ಮತ್ತು ಆರೋಪಿತರು ಸಂಬಂಧಿಕರು ಮತ್ತು ಅಕ್ಕಪಕ್ಕದ ಮನೆಯವರು ಇದ್ದು, 1ನೇ ಆರೋಪಿತನಾದ ನೀನು ಕೈತನಾಳ ಹೊಸುರ ಗ್ರಾಮದಲ್ಲಿರುವ ನಿನ್ನ ಮನೆಯ ಕಂಪ್ಯೂಟರ್ ಉತಾರ ಪಡೆದುಕೊಳ್ಳಲು ಚಾಸಾ.1 ರವರ ಮನಗೆ ಸಹಿ ಮಾಡಿಸಲು ಹೋಗಿದ್ದು, ಆಗ ಚಾಸಾ.4 ಮತ್ತು 6 ರವರು ತಮ್ಮ ಮನೆಯ ಕಂಪ್ಯೂಟರ್ ಉತಾರಗೆ ನೀವು ಸಹಿ ಮಾಡಬೇಕು ಅಂತಾ ಹೇಳಿದ್ದರಿಂದ, 1ನೇ ಆರೋಪಿತನಾದ ನೀನು ಆಗುವುದಿಲ್ಲ ಅಂತಾ ಹೇಳಿ ಹೋಗಿ ಅದೇ ಸಿಟ್ಟನಿಂದ ದಿಃ 24.08.2023 ರಂದು 13-00 ಗಂಟೆ ಸುಮಾರಿಗೆ ಚಾಸಾ.4 ರವರ ಮನೆಯ ಮುಂದೆ ಸಾರ್ವಜನಿಕ ರಸ್ತೆಯ ಮೇಲೆ ಆರೋಪಿತರಾದ ನೀವಿಬ್ಬರೂ ಕೂಡಿಕೊಂಡು ಚಾಸಾ.1 ರವರ ತಾಯಿ ಚಾಸಾ.4 ರವಳ ಜೊತೆ ತಂಟೆ ತೆಗೆದು 1ನೇ ಆರೋಪಿತನಾದ ನೀನು

ಚಾಸಾ.4 ರವಳಿಗೆ ಕಬ್ಬಿಣದ ರಾಡದಿಂದ ಅವಳ ಎಡಗೈ ರಟ್ಟೆಗೆ ಬಡಿದಿದ್ದು ಮತ್ತು 2ನೇ ಆರೋಪಿತನಾದ ನೀನು ಕಲ್ಲಿನಿಂದ ಅವಳಿಗೆ ಹೊಡಿಬಡಿ ಮಾಡಿ ಭಾರಿ ಗಾಯಪಡಿಸಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 326 ಸಹಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಸಮಾನ ಉದ್ದೇಶದಿಂದ ಮಾಡಿರುವಿರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಕೂಡಿಕೊಂಡು ಮೇಲೆ ಹೇಳಿದ ವಿಷಯಕ್ಕೆ ಸಂಬಂಧಪಟ್ಟಂತೆ ಚಾಸಾ.4 ರವರ ಜೊತೆ ತಂಟೆ ತೆಗೆದು ತಂಟೆ ಬಿಡಿಸಲು ಬಂದ ಚಾಸಾ.1,5 ರಿಂದ 7 ರವರಿಗೆ ಕಲ್ಲಿನಿಂದ ಅಲ್ಲಲ್ಲಿ ಬಡಿದು ಸಾಧಾ ಗಾಯಪಡಿಸಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 324 ಸಹಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಸಮಾನ ಉದ್ದೇಶದಿಂದ ಮಾಡಿರುವಿರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಕೂಡಿಕೊಂಡು ಮೇಲೆ ಹೇಳಿದ ವಿಷಯಕ್ಕೆ ಸಂಬಂಧಪಟ್ಟಂತೆ ಚಾಸಾ.4 ರವರ ಜೊತೆ ತಂಟೆ ತೆಗೆದು ತಂಟೆ ಬಿಡಿಸಲು ಬಂದ ಚಾಸಾ.1,5 ರಿಂದ 7 ರವರಿಗೆ ಕೈಯಿಂದ ಬಡಿದು ಸಾಧಾ ಗಾಯಪಡಿಸಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 323 ಸಹಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಸಮಾನ ಉದ್ದೇಶದಿಂದ ಮಾಡಿರುವಿರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ, ವೇಳೆಯಲ್ಲಿ ಆರೋಪಿತರಾದ ನೀವು ಕೂಡಿಕೊಂಡು ಮೇಲೆ ಹೇಳಿದ ವಿಷಯಕ್ಕೆ ಸಂಬಂಧಪಟ್ಟಂತೆ ಚಾಸಾ.1 ರವರ ಜೊತೆ ತಂಟೆ ತಗೆದು ಚಾಸಾ.4 ರವರಿಗೆ 'ಎ ಬೋಸಡಿ ಸಹಿ ಯಾಕ ಮಾಡುದಿಲ್ಲಾ" ಅಂತಾ ಅವಾಚ್ಯವಾಗಿ ಬೈದು, ತಂಟೆ ಬಿಡಿಸಲು ಬಂದ ಚಾಸಾ.1, 5 ರಿಂದ 7 ರವರಿಗೆ 'ಬೋಸಡಿ ಮಕ್ಕಳಿರ್ಯಾ" ಅಂತಾ ಅವಾಚ್ಯವಾಗಿ ಬೈದು, ಆ ಮೂಲಕ ಭಾ.ದಂ.ಸಂ. ಕಲಂ 504 ಸಹಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಸಮಾನ ಉದ್ದೇಶದಿಂದ ಮಾಡಿರುವಿರಿ.

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ, ವೇಳೆಯಲ್ಲಿ ಆರೋಪಿತರಾದ ನೀವು ಕೂಡಿಕೊಂಡು ಮೇಲೆ ಹೇಳಿದ ವಿಷಯಕ್ಕೆ ಸಂಬಂಧಪಟ್ಟಂತೆ ಚಾಸಾ.4 ರವರ ಜೊತೆ ತಂಟೆ ತಗೆದು ಚಾಸಾ.1, 4 ರಿಂದ 7 ರವರಿಗೆ 'ಬೋಸಡಿ ಮಕ್ಕಳಯರ್ಾ ಇದ ಒಂದು ಸಲ ಉಳದಿರಿ ಇನ್ನೊಮ್ಮೆ ಸಿಕ್ಕರ ನಿಮಗೆ ಕೊಲೆ ಮಾಡಿ ಹೊಳಿ ಕಾಣುಸುತ್ತೇವೆ" ಅಂತಾ ಜೀವದ ಬೆದರಿಕೆ ಹಾಕಿ, ಆ ಮೂಲಕ ಭಾ.ದಂ.ಸಂ. ಕಲಂ 506 ಸಹಕಲಂ 34 ಅಡಿಯಲ್ಲಿ  ಶಿಕ್ಷಾರ್ಹ ಅಪರಾಧವನ್ನು ಸಮಾನ ಉದ್ದೇಶದಿಂದ ಮಾಡಿರುವಿರಿ.

ಪ್ರಃ **1** :ನಿಮಗೆ ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ**?**

ಉ : ಆ**.1** ಮತ್ತು **2**

ಪ್ರಃ **2** :ನೀವು ಗುನ್ನಾ ಕಬೂಲಿ ಆಗುವಿಯೋ ಅಥವಾ ವಿಚಾರಣಾ ಆಗಬೇಕೋ**?**

ಉ : ಆ**.1** ಮತ್ತು **2**

**(** ಮೇಲಿನ ಆಪಾದನೆಯನ್ನು ಆರೋಪಿತರಿಗೆ ಓದಿ ಹೇಳಿ ಅವರಿಂದ ಬಂದ ಉತ್ತರಗಳನ್ನು ನನ್ನ ಸ್ವ ಅಕ್ಷಗಳಲ್ಲಿ ಬರೆದುಕೊಂಡೆ ಅಂತಾ ದೃಢೀಕರಸುತ್ತೇನೆ**)**

Sd/-

ದಿಃ 11.11.2024

2ನೇ ಹೆಚ್ಚುವರಿ ದಿ.ನ್ಯಾ.ದಂ.,
ಗೋಕಾಕ.